**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>**

**ಫೌಜದಾರಿ ಪ್ರಕರಣ ಸಂಖ್ಯೆ: 185/2021**

**ಸರಕಾರದ ಪರವಾಗಿ ಃ ಪೊಲೀಸ್ ಠಾಣೆ ಸೇಡಂ**

//ವಿರುದ್ಧ//

**ಆರೋಪಿ :** ಮಾಣಿಕರೆಡ್ಡಿ ತಂದೆ ವೆಂಕಟರೆಡ್ಡಿ ಹಲಕೋಡಾ
ವಃ 59 ವರ್ಷ, ಉಃ ಒಕ್ಕಲುತನ
ಸಾಃ ಹಲಕೋಡಾ ಗ್ರಾಮ
ತಾಃ ಚಿಂಚೋಳಿ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?
ಉಃ ಕೇಳಿರುತ್ತೇನೆ.

ಪ್ರಶ್ನೆ 2) ಚಾಸಾ.1/ಪ್ರಾಸಾ.4 ಅಂಬಮ್ಮ ಗಂಡ ಪಾಂಡು ಉದರಪೋಳ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 07.08.2023 ರಂದು, ಮೃತ ಪಾಂಡು ತಂದೆ ಹಣಮಂತ ಕುದರಪೋಳ ಇತ ಅವರ ಗಂಡ ಇರುತ್ತಾನೆ, ಅವರು ಹೊಲದಲ್ಲಿ ಟ್ರಾಕ್ಟರ ಉಳುಮೆ ಮಾಡುವಾಗ ಅಪಘಾತವಾಗಿ ಅದರ ಗಾಯದಿಂದ ತೀರಿಕೊಂಡಿರುತ್ತಾರೆ, ದೂರು ದಾಖಲೆಯ ಮೇಲಿರುವ ಹೆಬ್ಬಟಿನ ಗುರುತು ತಮ್ಮದೆ ಇರುತ್ತದೆ, ಸಾಕ್ಷಿ ದೂರು ದಾಖಲೆಯನ್ನು ಗುರುತಿಸಿರುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 3) ಚಾಸಾ.3/ಪ್ರಾಸಾ.7 ಜಗದೀಶ ತಂದೆ ರಾಮಪ್ಪ ಮಾಸಪಳ್ಳಿ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 13.03.2024 ರಂದು, ಈಗ ತೋರಿಸುತ್ತಿರುವ ಬಾವ ಚಿತ್ರದಲ್ಲಿ ಅವರು ಕಾಣಿಸುತ್ತಾರೆ, ಸದರಿ ದಾಖಲೆಯ ಮೇಲೆರುವ ಸಹಿ ಅವರದೆ ಇರುತ್ತದೆ, ಸಾಕ್ಷಿ ಶವ ಮಹಜರು ಪಂಚನಾಮೆಯನ್ನು ಗುರುತಿಸಿರುತ್ತಾರೆ, ಎಂದು ನುಡಿಯುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 4) ಚಾಸಾ.15/ಪ್ರಾಸಾ.9 ರಾಜಶೇಖರ ತಂದೆ ವಿಟೋಬಾ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 25.02.2026 ರಂದು, ಇವರು ಫಬ್ರುವರಿ 2020 ರಿಂದ ಡಿಸೆಂಬರ 2021 ರವರೆಗೆ ಸೇಡಂ ವೃತ ನಿರಕ್ಷಕರು ಎಂದು ಕರ್ತವ್ಯ ನಿರ್ವಹಿಸಿರುತ್ತಾರೆ, ದಿ. 07-09-2020 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-14ರವರಿಂದ ಪಡೆದುಕೊಂಡು ಪರಿಶಿಲಿಸಲಾಗಿ ದಿನಾಂಕ 07-09-2020ರಂದು ಗುನ್ನಾ ಸ್ಥಳಕ್ಕೆ ಭೇಟೆ ನೀಡಿ ಪಂಚರಾದ ಚಾಸಾ-4 ಮತ್ತು 5 ವರವ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಜರುಗಿಸಿರುತ್ತಾರೆ, ಸಾಕ್ಷಿಯು ನಿಪಿ-2 ಫೋಟೊವನ್ನು ನೋಡಿ ಗುರುತಿಸಿರುತ್ತಾರೆ, ಅದೇ ದಿನ ಚಾಸಾ-6 ರಂದ 10 ರವರ ಹೇಳಿಕೆಯನ್ನು

ದಾಖಲಿಸುತ್ತಾರೆ, ದಿನಾಂಕ 09-09-2020 ಪ್ರಕರಣದ ಆರೋಪಿತನಾದ ಮಾಣಿಕರೆಡ್ಡಿ ಈತನ ಮೇಲೆ ದಸ್ತಗಿರಿ ಕ್ರಮವನ್ನು ಜರುಗಿಸಿ ಸುಕ್ತ ಜಾಮೀನಿನ ಮೆಲೆ ಬಿಡುಗಡೆ ಮಾಡಿರುತ್ತಾರೆ, ದಿನಾಂಕ 11-09-2020 ರಂದು ಘಟನೆಯಲ್ಲಿ ಒಳಗಾದ ವಾಹನ ಸಂ. ಕೆ.ಎ. 32 ಟಿ.ಬಿ 6146 ನೆದ್ದನ್ನು ಇಂಡಿಮನೇಟಿ ಬಾಂಡನ್ನು ಪಡೆದುಕೊಂಡು ಆ.ಟಿ.ಓ ತಪಾಸಣೆ ಮಾಡಿ ವಾಹನ ಮಾಲಿಕರಿಗೆ ಬಿಡುಗಡೆ ಮಾಡಿರುತ್ತಾರೆ, ಸಾಕ್ಷಿಯು ಸದರಿ ಬಾಂಡನ್ನು ನೋಡಿ ಗುರುತಿಸಿರುತ್ತಾರೆ, ನಂತರ ದಿನಾಂಕ 10-10-2020ರಂದು ಟ್ರ್ಯಾಕ್ಟರ ತಪಾಸಣೆ ಎಂ.ವಿ.ಎ ರಿಪೋಟ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ, ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿರುತ್ತಾರೆ, ದಿನಾಂಕ 19-10-2020 ರಂದು ಮೃತ ಪಾಂಡು ರವರ ಶವಾಪರೀಕ್ಷಾ ವರದಿಯನ್ನು ಪಡೆದುಕೊಂಡಿರುತ್ತಾರೆ, ಸಾಕ್ಷಿಯು ಸದರಿ ವರದಿ ಗುರುತಿಸಿರುತ್ತಾರೆ, ನಂತರ ಅದೇ ದಿನ ಘಟನೆ ನಡೆದ ಸ್ಥಳಕ್ಕೆ ಸಂಬಂಧಿಸಿದ ಪಾಣಿ ಪತ್ರಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ, ದಿನಾಂಕ 19-10-2020ರಂದು ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 5) ನೀನು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ ?
ಉಃ

ಪ್ರಶ್ನೆ 6) ನಿನ್ನ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?
ಉಃ

(ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಂಡು ಆತನಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಆತನ ಹೇಳಿಕೆಯನ್ನು ಪಡೆಯಲಾಯಿತು).

ಸಹಿ/-

ದಿನಾಂಕ ಃ 09-03-2026 ಪ್ರ.ದ. ನ್ಯಾ.ದಂ. ಸೇಡಂ.